ದಿಃ 10-02-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಡಿಕ್ರಿ ಹೋಲ್ಡರ್ ಪರ ವಕೀಲರಾದ ಶ್ರೀ ಬಿ.ಹೆಚ್. ಇವರಿಂದ ಮುಂದುವರೆದ ಪಾಟೀ ಸವಾಲುಃ

3. ನಾನು ಮತ್ತು ನನ್ನ ತಂದೆ ಇಬ್ಬರು ಒಂದೇ ಕುಟುಂಬದಲ್ಲಿ ಇದ್ದೇವು ಅಂದರೆ ಸುಳ್ಳು. ದಿಃ 26-03-1986 ರಂದು ಆದ ಕ್ರಯ ಪತ್ರವನ್ನು ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುತ್ತೇನೆ. ನಿಪಿಃ5ರ ಪ್ರಕಾರ ನನ್ನ ತಂದೆ, ಸೈಯದ್ ಅಮಾನುಲ್ಲಾ, ಸೈಯದ್ ಸುಭಾನು ಮತ್ತು ಸೈಯದ್ ಸಾಬ್‌ಜಾನ್ ಸಾಬ್ ಇವರು ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ 1980-81ರಲ್ಲಿ ಕ್ರಯ ಆಗಿರುತ್ತದೆ ಮತ್ತು 1986 ರಲ್ಲಿ ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸಲಾಗಿದೆ. ನಿಪಿಃ5ರ ಪ್ರಕಾರ ನಾನು 4 ಸೈಟುಗಳನ್ನು ನನ್ನ ತಂದೆಯ ಕಡೆಯಿಂದ ತೆಗೆದುಕೊಂಡಿರುತ್ತೇನೆ. ಒಟ್ಟು ಮುಖ್ತ್ಯಾರನಾಮೆಯಿಂದ ಮೇಲ್ಕಂಡ 4 ಪ್ಲಾಟುಗಳನ್ನು ನನ್ನ ತಂದೆ ಮಾರಾಟ ಮಾಡಿರುತ್ತಾರೆ. ನನ್ನ ತಂದೆ ನನಗೆ ಪ್ಲಾಟುಗಳನ್ನು ಕ್ರಯಕ್ಕೆ ಕೊಡುವ ಕಾಲಕ್ಕೆ ಮೇಲೆ ಹೇಳಿದ ಉಳಿದ ಮೂರು ಜನರು ಜೀವಂತ ಇದ್ದರೋ ಅಥವಾ ಇಲ್ಲ ಎಂಬಂದು ಗೊತ್ತಿಲ್ಲ. ಈ ಸಂಗತಿಯ ಕುರಿತು ನಾನು ವಿಚಾರಿಸಿಲ್ಲ ಕಾರಣ ಒಟ್ಟು ಮುಖ್ತ್ಯಾರನಾಮೆ ದಾಖಲೆ ಇತ್ತು. ಅದನ್ನು ಈ ಪ್ರಕರಣದಲ್ಲಿ ಹಾಜರು ಮಾಡಿಲ್ಲ. ನಿಪಿಃ1ರ ಪ್ರಕಾರ ನನ್ನ ತಂದೆ ಮತ್ತು ಮೇಲೆ ಹೇಳಿದ ಉಳಿದ ಮೂರು ಜನರು ಕೂಡಿಕೊಂಡು ದಾವಾ ಸರ್ವೆ ನಂಬರಿನಲ್ಲಿ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡ ಕುರಿತು ಸುಳ್ಳು ಹೇಳುತಿತದ್ದೆನೆಂದರೆ ಸರಿಯಲ್ಲ. ನನ್ನ ತಂದೆಯವರಿಗೆ ಮೇಲೆ ಹೇಳಿದ ಮೂರು ಜನರು ಒಟ್ಟು ಮುಖ್ತ್ಯಾರನಾಮೆಯನ್ನು ಬರೆದುಕೊಟ್ಟಿರಲಿಲ್ಲ ಅಂದರೆ ಸುಳ್ಳು. ನಿಪಿಃ5ರಲ್ಲಿ ಹೇಳಿದ ಸ್ವತ್ತಿಗೆ ಸಂಬಂಧಪಟ್ಟಂತೆ ನನ್ನ ತಂದೆ ಮತ್ತು ಮೇಲೆ ಹೇಳಿದ ಮೂರು ಜನರು

ಮಾಲೀಕರು ಇರಲಿಲ್ಲ ಅಂದರೆ ಸುಳ್ಳು. ಕಿರ್ಲೋಸ್ಕರ್ ಟ್ರಸ್ಟ್ ಬಿಲ್ಡಿಂಗ್ ಹಿಡಿದು ಪೂರ್ವಕ್ಕೆ ಇರುವ ಹರಪನಹಳ್ಳಿ-ದಾವಣಗೆರೆಯ ರಸ್ತೆಯ ಅಂಚಿನವರೆಗೆ ಈಗಲೂ ಸಹ ದಾವಾ ಸ್ವತ್ತು ಕೃಷಿ ಭೂಮಿಯಾಗಿದ್ದರೂ ಸಹ ಅದರಲ್ಲಿ ಸೈಟುಗಳನ್ನು ಹಾಕಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ:೫ರ ಪ್ರಕಾರ ನಮಗೆ ಯಾವುದೇ ಆಸ್ತಿ ಬಂದಿಲ್ಲ ಮತ್ತು ಮಾಲೀಕರು ಅಲ್ಲಾ ಅಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)**

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.